MOTION TO PASS

SRI A.B.J AKANUR (Minister for Co-Operation)Sir, I Beg to move:

"That the Karnataka Co-operative Societies (Second Amendment) Bill, 1980 be passed

CHAIRMAN.—

The question is:

"That the Karnataka Co-operative Societies (Second Amendment) Bill, 1980 be passed."

The Motion was adopted and the Bill was passed.

THE KAKNATAKA DEBT RELIEF BILL, 1980

MOTION TO CONSIDER

SRI A.B. JAKANUR (Minister for Co-operation).—

I beg to move:

"That the Karnataka Debt Relief Bill, 1980 be taken into consideration."

(The question was proposed)

I would like to mention the salient features of this Bill. Sir, this Bill has been introduced mainly to provide relief from indebtedness to small farmers, land less agricultural labourers and weaker sections of the people, in the State of Karnataka. Accordingly, in the definition, we have stated who is a small farmer, agricultural labourer, Horticulturist etc.,

(SRI H. T. KRISHNAPPA in the Chair)

Instead of two units, I have sought an amendment for one unit. Just now I have sent a notice of that amendment.

MR. SPEAKER Please explain the general and salient features of the Bill, if necessary, You need not explain if you feel that the Bill iself is self-explanatory.

SRI A B JAKNUR—An Ordinance was issued in 1979 and to replace that ordinance this Bill has been brought. After the enactment of Karnataka Debt Relief Act. It was represented that there should be some revisionary powers to be invested with the Deputy Commissioners. Accordingly that provision has also been made. The income limit of weaker sections has been increased from Rs. 2,400 to Rs. 4,800/-. These are the important features on which the discussion may start.

ಶ್ರೀ ಡಿ. ಜಯದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ, ಈ ಕರ್ನಾಟಕ ಡೆಟ್ ರಿಲೀಫ್ ಬಿಲ್ಲನ್ನು ಏನು ಇಲ್ಲಿ ತರಲಾಗಿದೆ ಇದನ್ನು ಸರ್ಕಾರ ಆಲೋಚನೆ ಮಾಡಿ ತಂದಿದೆಯೆಂದು ನನಗನ್ನಿಸುತ್ತದೆ. ಈ ಆರ್ಡಿನೆನ್ಸ್ ಮೂಲಕ ಇದನ್ನು ತಂದಾಗ ನನಗೆ ಕಂಡುದು ಏನೆಂದರೆ, ಈಗ ಏನು ಒಂದು ಅಮೆಂಡ್ ಮೆಂಟನ್ನು ತಮ್ಮ ಹತ್ತಿರಕ್ಕೆ ಕಳುಹಿಸಿದ್ದೇನೆ ಅದನ್ನು ಹಿಂದಿನ ಸರ್ಕಾರ ಆಗಲೇ ತಂದಿತ್ತು, ಅದನ್ನು ಜಾರಿಗೆ ಕೊಡುವುದಕ್ಕೆ ಆಗಲಿಲ್ಲ ಎನ್ನುವ ಒಂದು ಅನುಭವದ ಮೇಲೆ ಈಗ ಇದನ್ನು ತಂದಿದ್ದಾರೆಂದು ಕಾಣುತ್ತದೆ. ದಯಮಾಡಿ ನನ್ನ ಅಮೆಂಡ್‌ಮೆಂಟನ್ನು ಸರ್ಕಾರ ಕನ್‌ಸಿಡರ್ ಮಾಡಬೇಕು. ಈಗ ಪೇಜ್ ೪ರಲ್ಲಿ ಸೆಕೆಂಡ್ ಪ್ಯಾರಾದಲ್ಲಿ......

ಶ್ರೀ ಬಿ. ಬಸವಲಿಂಗಪ್ಪ.—ಈ ಮನೆಯ ಸಂಪ್ರದಾಯ ಏನಿದೆ ಎಂದರೆ, ಯಾರೇ ಮಂತ್ರಿಗಳಾಗಿರಲಿ, ಸದಸ್ಯರಾಗಿರಲಿ, ತಮ್ಮ ಭಾಷಣವನ್ನು ಇಂಗ್ಲೀಷ್‌ನಲ್ಲಿ ಪ್ರಾರಂಭ ಮಾಡಿದರೆ, ಇಂಗ್ಲೀಷ್‌ನಲ್ಲೇ ಮುಗಿಸಬೇಕೆಂದಿದೆ. ಕನ್ನಡದಲ್ಲಿ ಮಾಡಿದರೆ, ಕನ್ನಡದಲ್ಲೇ ಮುಗಿಸಬೇಕು ಎಂದು ಇದೆ. ಶ್ರೀಮಾನ್ ಜಕನೂರ್ ಅವರು ಅರ್ಧ ಭಾಷಣವನ್ನು ಕನ್ನಡದಲ್ಲಿ ಇನ್ನರ್ಧವನ್ನು ಇಂಗ್ಲೀಷ್‌ನಲ್ಲಿ ಮಾಡಿದರು. ಈಗ ಶ್ರೀ ಜಯದೇವರಾಜ ಅರಸ್ ಅವರು ಅರ್ಧ ಕನ್ನಡ ಹಾಗೂ ಅರ್ಧ ಇಂಗ್ಲೀಷ್‌ನಲ್ಲಿ ಮಾತನಾಡುತ್ತಿದ್ದಾರೆ.

ಚೇರ್ಮನ್.—ಎಲ್ಲರೂ ಸಭೆಯಲ್ಲಿ ಕನ್ನಡದಲ್ಲೇ ಮಾತನಾಡಬೇಕು ಎಂಬ ಅಭಿಲಾಶೆ ನನಗೂ ಇದೆ. ಅದನ್ನು ಒತ್ತಾಯ ಮಾಡತಕ್ಕ ಅಧಿಕಾರ ನಮಗೆ ಇಲ್ಲ.

ಶ್ರೀಮತಿ ಎಸ್. ಪ್ರಮೀಳ.—ಇಲ್ಲಿ ಕನ್ನಡದಲ್ಲಿಯೇ ಬಿಲ್‌ಗಳನ್ನು ತರುವುದು ಒಳ್ಳೆಯದು. ಇದನ್ನು ಇಂಗ್ಲೀಷ್‌ನಲ್ಲಿ ತಂದು, ಇದರ ಮೇಲೆ ಕನ್ನಡದಲ್ಲಿ ಮಾತನಾಡಲು ಕೆಲವು ಪದಗಳಿಗೆ ಅರ್ಥ ಸಿಗುವುದಿಲ್ಲ.

ಚೇರ್ಮನ್.—ಅದೂ ಕೂಡ ಸಾಧ್ಯ.

ಶ್ರೀಮತಿ ಎಸ್. ಪ್ರಮೀಳ,—ರಾಜ್ಯ ಭಾಷೆ ಕನ್ನಡ, ಬಿಲ್ ಇಂಗ್ಲೀಷ್‌ನಲ್ಲಿ ಇಡುತ್ತಿದ್ದಾರೆ. ಇದು ಸರಿಯಲ್ಲ.

ಚೇರ್ಮನ್.—ಕ್ರಮೇಣ ಅದರ ಕಡೆಗೂ ಗಮನ ಕೊಡಬೇಕಾಗುತ್ತದೆ. ಈಗ ಶ್ರೀಮಾನ್ ಬಸವಲಿಂಗಪ್ಪನವರು ಎತ್ತಿರತಕ್ಕ ಒಂದು ಕ್ರಿಯಾ ಲೋಪ ಏನೆಂದರೆ, ಸದನದಲ್ಲಿ ಇಂಗ್ಲೀಷನ್ನು ಆದಷ್ಟು ಕಡಿಮೆ ಮಾಡಿ ಕನ್ನಡದಲ್ಲಿ ಮಾತನಾಡುವುದು ಒಳ್ಳೆಯದು ಎಂದು. ಅದು ಬಹಳ ಸ್ವಾಗತಾರ್ಹವಾದುದು.

ಶ್ರೀಮತಿ ಎಸ್. ಪ್ರಮೀಳ.—ನೀವು ಸದನದಲ್ಲಿ " ಏಸ್ ಹ್ಯಾವಿಟ್ " ಎಂದು ಹೇಳುತ್ತೀರಲ್ಲಾ ಅದನ್ನೂ ಕನ್ನಡದಲ್ಲಿ ಹೇಳಿದರೆ ಚನ್ನಾಗಿರುತ್ತದೆ.

ಚೇರ್ಮನ್.—ಅದೂ ಒಪ್ಪುವ ವಿಚಾರ.

ಶ್ರೀ ಡಿ. ಜಯದೇವರಾಜ ಅರಸ್,—ಮಾನ್ಯ ಅಧ್ಯಕ್ಷರೆ ಈ ಒಂದು ಕಾನೂನು ತಂದಿರುವಾಗ ಇದರ ೪ನೇ ಪುಟದಲ್ಲಿ ಏನಿದೆ ಎಂದರೆ,

> In clause 11 (ii) it is stated thus : " he and members of his family own immovable property anywhere in India the market value of which is not less than ten thousand rupees."

ಎಂದು ಸೀಲಿಂಗ್ ಲಿಮಿಟ್ ಹಾಕಿರುತ್ತೀರಿ, ಸೆಕ್ಷನ್ ೧೧ರಲ್ಲಿ ಯಾವುಯಾವುದಕ್ಕೆ ಎಷ್ಟೆಷ್ಟು ವ್ಯಾಲ್ಯೂ ಮಾಡಬೇಕೆಂಬುದನ್ನು ಈ ಒಂದು ಕ್ಲಾಸ್ ಎಕ್ಸ್‌ಟ್ರಾ ಸೇರಿಸಿ ಮಾಡಿದ್ದೀರಿ. ಪ್ರಾಯಶಃ ಈ ಒಂದು ಸೆಕ್ಷನನ್ನು ಕೈಬಿಡದೇ ಹೋದರೆ ಏನು ರಿಲೀಫ್ ಫಂಡ್ ಕೊಡಬೇಕೆಂದು ಮಾಡಿದ್ದೀರೋ ಅದು ಈ ಒಂದು ಸೆಕ್ಷನ್‌ನಿಂದ ರಿಲೀಫ್ ಸಿಗದ ಹಾಗೆ ಆಗುತ್ತದೆ. ಆಸ್ತಿ ಬಗ್ಗೆ ೧೦,೦೦೦ ರೂಪಾಯಿಗಳು ಎಂದು ವಾಲ್ಯೂಯೇಷನ್ ಮಾಡಿದ್ದೀರಿ. ಒಬ್ಬನಿಗೆ ೧೦ ಅಡಿ ೧೨ ಅಡಿ ಜಾಗ ಇದ್ದರೂ ಸಹ ೧೦,೦೦೦ ರೂಪಾಯಿಗಳ ಬೆಲೆ ಬರುತ್ತದೆ. ಇಲ್ಲಿ ಆದಾಯದ ಪ್ರಶ್ನೆ ಬರುತ್ತದೆ. ಕ್ಲಾಸ್ ಒಂದರಲ್ಲಿ ಆದಾಯಕ್ಕೆ ಸಾಕಷ್ಟು ವಿವರ ಕೊಟ್ಟು ವ್ಯಾಲ್ಯೂ ಮಾಡಬಹುದು. ಇದಕ್ಕೆ ಇಲ್ಲಿ ಒಂದು ಅಕ್ಟನ್ನು ತೋರಿಸಿದ್ದೀರಿ. ಇಲ್ಲಿ ೧೦,೦೦೦ ರೂಪಾಯಿ ಹಾಕುವುದು ಅವಶ್ಯಕವಿಲ್ಲ. ದಯವಿಟ್ಟು ಇದನ್ನು ಬಿಟ್ಟುಬಿಟ್ಟು ಪಾಸ್

ಮಾಡಿದರೆ ಹೆಚ್ಚು ಪ್ರಯೋಜನವಾಗುತ್ತದೆ. ಹೋದ ಚುನಾವಣೆಯಲ್ಲಿ ಜನರು ಸಾಕಷ್ಟು ಮಾತನಾಡಿದ್ದಾರೆ. ಇದರ ತೊಂದರೆ ಬಗ್ಗೆ ಎಲ್ಲರೂ ಹೇಳಿದರು. ಪೇಜ್ ೪ರಲ್ಲಿ ಸೆಕೆಂಡ್ ಪ್ಯಾರಾದಲ್ಲಿ ಏನಿದೆ ಅದನ್ನು ತಾವು ದಯವಿಟ್ಟು ಕೈ ಬಿಡಬೇಕಾದ್ದು ಅವಶ್ಯಕ ಇದೆ. ಇದರಿಂದಾಗಿ ರಿಲೀಫ್ ಕೊಡುವುದಕ್ಕೆ ಬಹಳ ತೊಂದರೆಯಾಗುತ್ತದೆ. ಇದೊಂದನ್ನು ಬಿಟ್ಟು ಇನ್ನೆಲ್ಲವನ್ನೂ ನಾನು ಸ್ವಾಗತ ಮಾಡಿದ್ದೇನೆ, ಬಾಕಿ ಎಲ್ಲವನ್ನೂ ಸಮಗ್ರವಾಗಿ ಆಲೋಚನೆ ಮಾಡಬೇಕಾಗುತ್ತದೆ. ಇದನ್ನು ಸರಿಪಡಿಸಿಕೊಂಡು ಒಂದು ತಿದ್ದುಪಡಿ ತಂದು ಅದನ್ನು ಕೈಬಿಡಬೇಕೆಂದು ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ

† ಶ್ರೀ ಜೆ. ಎಚ್. ಪಟೇಲ್ (ಚನ್ನಗಿರಿ) —ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿಯನ್ನು ನಾನು ಅನುಮೋದಿಸುತ್ತಾ ಈ ಕಾನೂನು ಪರಿಣತಿ ಬಗ್ಗೆ ಮತ್ತು ಈ ಕಾನೂನು ತಂದಾಗ ಆದ ಪರಿಣಾಮದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ಇನ್ನೂ ಕೆಲವು ಅಗತ್ಯವಾಗಿ ಆಗಬೇಕಾದ ತಿದ್ದುಪಡಿಗಳ ಬಗ್ಗೆ ಹೇಳುತ್ತೇನೆ. ಈಗಾಗಲೇ ಮಾನ್ಯ ಜಯದೇವರಾಜ ಅರಸ್ ಅವರು ಹೇಳಿದ ಹಾಗೆ, ಆಸ್ತಿಯ ಬೆಲೆಯನ್ನು ಕಟ್ಟುವಾಗ ಅದನ್ನು ೧೦,೦೦೦ ರೂಪಾಯಿಗಳಿಗೆ ಕಟ್ಟಿದರೆ ಇದರಿಂದ ಉದ್ದೇಶವೇನಿದೆ ಅದು ಅಷ್ಟು ಸಫಲವಾಗುವುದಿಲ್ಲವೆಂದು ನಾನು ಹೇಳುತ್ತೇನೆ. ಸಾಧ್ಯವಿದ್ದರೆ ಇದನ್ನು ತೆಗೆದು ಹಾಕುವುದು ಒಳ್ಳೆಯದು. ನೀವು ಜನರಿಗೆ ಸಹಾಯ ಮಾಡಬೇಕೆಂದು ಇದ್ದರೆ ಅರೆ ಮನಸ್ಸಿನಿಂದ ಮಾಡಬಾರದು. ಇದನ್ನು ತಾವು ಡೆಟ್ ರಿಲೀಫ್ ಆಕ್ಟ್ ಎಂದು ಕರೆಯುತ್ತೀರಿ. ಸಾಲ ವಿಮೋಚನಾ ಕಾರ್ಯಕ್ರಮದ ಒಳಗೆ, ಸಣ್ಣ ರೈತರಿಗೆ, ಕೃಷಿ ಕಾರ್ಮಿಕರು, ಅವರು ಏನಾದರೂ ಸಾಲ ಮಾಡಿದರೆ ಅದನ್ನು ವಿಮೋಚನೆ ಮಾಡುವುದಕ್ಕಾಗಿ ಇದನ್ನು ಮಾಡಿದ್ದೀರಿ ಏನೋ ಆಯಿತು. ಇದರಿಂದ ಸಾಲಗಾರರಿಗೆ ದುಡ್ಡನ್ನು ಕೊಡಬೇಡಿ ಎಂದು ಹೇಳಿದ ಹಾಗೆ ಅದರೆ ಇಂತಹವರಿಗೆ ಏನಾಯಿತು ? ಇದರಿಂದ ಅವರಿಗೆ ವಿನಾಯಿತಿ ಸಿಗುವುದಿಲ್ಲವೆಂದು ಹೇಳಿ ಒಂದು ಬೇರೆ ವರ್ಗವನ್ನೇ ಸೃಷ್ಟಿ ಮಾಡಿದ್ದೀರಿ.

೪–೩೦ ಪಿ. ಎಂ.

ಅವರಿಗೆ ಬೇರೆ ಸಾಹುಕಾರರಿಂದ ತೆಗೆದುಕೊಂಡಿರುವಂತಹ ಸಾಲವನ್ನು ವಾಪಸ್ಸು ಕೊಡಬೇಕಾಗಿಲ್ಲವೆಂದು ಹೇಳಿದ್ದಾರೆ. ಆಂದರೆ ಸರ್ಕಾರಕ್ಕೆ ಆತನು ಕೊಡಬೇಕಾದುದು ಇದೆ. ಈ ಕಾನೂನಿನ ವ್ಯಾಪ್ತಿಯಲ್ಲಿ ಅದು ಬರುವುದಿಲ್ಲ ಎಂಬುದಾಗಿ ತಾವು ಹೇಳುತ್ತೀರಿ ಅದು ನಮಗೂ ಅರ್ಥವಾಗುತ್ತದೆ ಬಿಹಾರ್ ಸರ್ಕಾರದವರು ಇಂತಹ ಒಂದು ಕಾನೂನನ್ನು ಶ್ರೀಮಾನ್ ಕರ್ಪೂರಿ ಟ್ಯಾಕೂರ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಮಾಡಿದರು.

ಶ್ರೀ ಎಚ್. ಡಿ. ದೇವೇಗೌಡ.—ಅವರು ಹೊರಟು ಹೋದರಲ್ಲಾ.

ಶ್ರೀ ಜೆ. ಎಚ್. ಪಟೇಲ್.—ಒಳ್ಳೆಯದನ್ನು ಮಾಡಿದವರೆಲ್ಲಾ ಹೊರಟು ಹೋದರು. ಕೆಟ್ಟದ್ದನ್ನು ಮಾಡಿದವರೇ ಇರುತ್ತಾರೆ. ಕರ್ಪೂರಿ ಟಾಕೂರ್‌ರವರು ಇಂತಹ ಒಂದು ಕಾನೂನನ್ನು ತಂದರು. ಅದರಲ್ಲಿ ಕೃಷಿ ಕಾರ್ಮಿಕರು, ಮತ್ತು ಸಣ್ಣ ರೈತರು ಯಾರು ಇದ್ದಾರೆ ಅಂತಹವರು ಸರ್ಕಾರಕ್ಕೆ ಒಂದು ಸಾವಿರ ರೂಪಾಯಿಗಳ ಒಳಗೆ ಕೊಡಬೇಕಾದುದು ಇದ್ದರೆ ಅಂತಹ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕು ಎಂಬುದಾಗಿ ಒಂದು ಕಾನೂನನ್ನು ಮಾಡಿದರು. ನಮ್ಮ ರಾಜ್ಯದ ಮಟ್ಟಿಗೆ ಇದು ಪ್ರಗತಿಪರವಾದ ಕಾನೂನು. ಬಹಳ ಸಣ್ಣ ರೈತರಿಗೆ, ಕೃಷಿ ಕಾರ್ಮಿಕರಿಗೆ ಶ್ರೀಮಂತರು ಹಣವನ್ನು ಕೊಟ್ಟು ಅದರ ಬಡ್ಡಿಗೋಸ್ಕರ ದುಡಿಸಿಕೊಳ್ಳುತ್ತಿದ್ದರು. ಇದೂ ಒಂದು ರೀತಿಯಲ್ಲಿ ಹೆಚ್ಚು ಕಡಿಮೆ ಜೀತ ಪದ್ಧತಿಯಂತೆ ಇತ್ತು. ಈ ರೀತಿ ಶ್ರೀಮಂತರು ಬಡವರಿಂದ ಬಡ್ಡಿಗೋಸ್ಕರ ದುಡಿಸಿಕೊಳ್ಳತಕ್ಕಂತಹ ವ್ಯವಸ್ಥೆ ಏನಿತ್ತು ಅಂತಹದ್ದನ್ನು ತೆಗೆಯುವುದಕ್ಕೋಸ್ಕರ ಇದನ್ನು ಮಾಡಿದ್ದಾರೆ. ಇದಕ್ಕಾಗಿ ಇದು ಒಂದು ಸಂಪೂರ್ಣ ಸ್ವಾಗತಾರ್ಹ ಕಾನೂನು. ಇದನ್ನು ತಂದಿದ್ದರಿಂದ ಸಮಾಜದಲ್ಲಿ ಆಗಿರುವ ಪರಿಣಾಮವನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಕೊಟ್ಟ ಸಾಲವನ್ನು ವಾಪಸ್ಸು ಕೊಡಬೇಡಿ ಎಂಬುದಾಗಿ ಹೇಳಿದ್ದೀರಿ ಬಹಳ ಸಂತೋಷ. ಎಲ್ಲರಿಗೂ ಬಹಳ ಆನಂದವಾಯಿತು. ಇದರಿಂದ ಸುಮಾರು ೧೦೦ ಕೋಟಿ ರೂಪಾಯಿಗಳ ಸಾಲ ಕರ್ನಾಟಕದಲ್ಲಿ ಮನ್ನಾ ಆಯಿತು, ಇದರಿಂದಾಗಿ ಹಳ್ಳಿಗಾಡಿನಲ್ಲಿರುವಂತಹ ಸಣ್ಣ ಪುಟ್ಟ ಕೂಲಿಕಾರರಿಗೆ ಹಾಗೂ ಸಣ್ಣ ರೈತನಿಗೆ ಎಂತಹ ಕಷ್ಟ ಬಂದಿದೆ ಎಂದರೆ, ಅವನಿಗೆ ಇನ್ನೇನು ಪ್ರಾಣ ಹೋಗುವ ಸಂದರ್ಭ ಬಂದಾಗ ಎಲ್ಲೂ ಹೋಗದ ಹಾಗೆ ಆಯಿತು. ಸರ್ಕಾರದ ಈ

ಒಂದು ಕ್ರಮದಿಂದ ಹಳ್ಳಿಗಾಡಿನಲ್ಲಿ ಬಡವರು ಜೀವನ ಮಾಡುವುದು ಬಹಳ ಕಷ್ಟಕರವಾಗಿದೆ. ಒಬ್ಬ ಸಾಮಾನ್ಯ ಮನುಷ್ಯ ತನ್ನ ಮಗನಿಗೆ ಜ್ವರವೋ ಅಥವಾ ಇನ್ನೇನೋ ಕಾಯಿಲೆ ಬಂದು ಆಸ್ಪತ್ರೆಗೆ ಕರೆದು ಕೊಂಡು ಹೋಗಬೇಕೆಂದರೆ ಆತನಲ್ಲಿ ದುಡ್ಡು ಇರುವುದಿಲ್ಲ, ಅಥವಾ ತನ್ನ ಮಗನಿಗೆ ಸ್ಕೂಲಿನಲ್ಲಿ ಫೀಜು ಕೊಡಬೇಕೆಂದರೆ ಆತನಲ್ಲಿ ಹಣ ಇರುವುದಿಲ್ಲ. ಅಂತಹ ಸಮಯದಲ್ಲಿ ೨೦-೩೦ ರೂಪಾಯಿಗಳನ್ನು ಯಾರಿಂದಲಾದರೂ ತೆಗೆದುಕೊಳ್ಳಬೇಕೆಂದರೆ ಆತನಿಂದ ಸಾಧ್ಯವಾಗುವುದಿಲ್ಲ. ಕಾರಣ ದುಡ್ಡು ಇರುವವರು ಇವರಿಗೆ ಸಹಾಯ ಮಾಡಬೇಕೆಂದರೆ ಸರ್ಕಾರದ ಈ ಒಂದು ಕಾನೂನಿಂದ ಕೊಟ್ಟವರ ಸಾಲ ಕೊಡಬೇಡ ಎಂಬುದಾಗಿ ಸರ್ಕಾರದವರು ಹೇಳುತ್ತಾರೆ ನೀನು ಹೋಗಿ ಸರ್ಕಾರದವರ ಹತ್ತಿರ ತೆಗೆದುಕೋ; ಎಂಬುದಾಗಿ ಹೇಳುತ್ತಾರೆ. ಹಳ್ಳಿಗಾಡಿನಲ್ಲಿ ಇರತಕ್ಕಂತಹ ಹಣವಂತ ಜನ ಬಹಳ ಬಿಗುವಾಗಿದ್ದಾರೆ. ಸರ್ಕಾರ ಈ ಬಗ್ಗೆ ಅವರಿಗೆ ಬದಲಿ ವ್ಯವಸ್ಥೆಯನ್ನು ಮಾಡಬೇಕು. ಸೊಸೈಟಿಗಳ ಮೂಲಕ ಆತನಿಗೆ ೧೦೦ ರೂಪಾಯಿಗಳ ವರೆಗೂ ಸಾಲವನ್ನು ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಿದ್ದೀರಿ. ನಮ್ಮ ಮಾನ್ಯ ಮಿತ್ರರಾದ ಶ್ರೀಮಾನ್ ನಾನಯ್ಯನವರು ಹಾಗೂ ವೀರಶೆಟ್ಟಿ ಕುಶ್ನೂರ್ ರವರು ಸೊಸೈಟಿಗಳು ಚೆನ್ನಾಗಿ ಕೆಲಸ ಮಾಡುತ್ತಿವೆ ಎಂಬುದಾಗಿ ಹೇಳಬಹುದು. ಸೊಸೈಟಿಗಳು ಏನು ಮಾಡುತ್ತಿವೆ ಎಂಬುದನ್ನು ಬೇರೆ ಸಂದರ್ಭದಲ್ಲಿ ಹೇಳುತ್ತೇನೆ, ಸೊಸೈಟಿ ಅಂದರೆ ಅದಕ್ಕೆ ಒಂದು ಅರ್ಥ ಇದೆ. ಕಾನೂನು ಪ್ರಕಾರ ಒಳಗೆ ಹೋಗಬೇಕೆಂದರೆ ಸೊಸೈಟಿ ಮಾಡಬೇಕು, ಸೊಸೈಟಿಯಲ್ಲಿ ಸಕ್ಕರೆ ತಿನ್ನುತ್ತಾರೆ. ಸಕ್ಕರೆ ತಿಂದರೆ ಜೀರ್ಣಿಸಿ ಕೊಳ್ಳಬಹುದು, ಆದರೆ ಗೊಬ್ಬರ ತಿನ್ನುತ್ತಾರೆ, ಅದನ್ನೂ ಜೀರ್ಣಿಸಿಕೊಳ್ಳುವ ಶಕ್ತಿ ಚೆನ್ನಾಗಿ ಅವರಿಗೆ ಇದೆ. ಹಳ್ಳಿಗಾಡಿನಲ್ಲಿ ಅರ್ಥ ವ್ಯವಸ್ಥೆಯಲ್ಲಿ ಒಂದು ಸಂದಿಗ್ಧ ಪರಿಸ್ಥಿತಿ ಬಂದಿದೆ. ಅವರ ಮೇಲೆ ಇದ್ದಂತಹ ಸಾಲದ ಹೊರೆಯನ್ನು ವಜಾ ಮಾಡಿದ್ದು ಸರಿ, ಆದರೆ ಮತ್ತೆ ಅವನಿಗೆ ಏನಾದರೂ ಸಹಾಯ ತಕ್ಷಣ ಸಿಗಬೇಕಾದರೆ ಬದಲಿ ವ್ಯವಸ್ಥೆಯ ಅಗತ್ಯ ಬಹಳ ಇದೆ. ಅದರ ಬಗ್ಗೆ ನಾನು ಉದಾಹರಣೆಯನ್ನು ಕೊಡುತ್ತೇನೆ. ಆ ರೀತಿಯ ಉದಾಹರಣೆಯನ್ನು ಕೊಟ್ಟರೂ ಕೆಲವೊಮ್ಮೆ ಆ ರೀತಿ ಮಾಡುವುದಕ್ಕೆ ಸಾಧ್ಯವಾಗದೇ ಇರಬಹುದು. ಈ ದೇಶದಲ್ಲಿರುವ ಸಣ್ಣ ಸಣ್ಣ ರೈತನಿಗೆ, ಅಥವಾ ಬಡವರಿಗೆ ಅವರ ಬಟ್ಟೆ ಯನ್ನು ಇಟ್ಟುಕೊಂಡೋ, ಅಥವಾ ಮತ್ತೆ ಇನ್ನೇನನ್ನಾದರೂ ಇಟ್ಟುಕೊಂಡು ಹಣವನ್ನು ಕೊಡತಕ್ಕಂತಹ ವ್ಯವಸ್ಥೆ ಫ್ರಾನ್ಸ್ ಮತ್ತಿತರ ಕೆಲವು ಕಡೆಗಳಲ್ಲಿ ಇವೆ. ಆ ರೀತಿ ನಮ್ಮಲ್ಲಿ ಮಾಡಬೇಕಾದರೆ ಅದರಿಂದ ಮತ್ತೆ ಇನ್ನೇನಾದರೂ ಬರಬಹುದು, ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಹೋಗಿ ಮತ್ತೊಂದು ಹೊಸ ಸಮಸ್ಯೆ ಹುಟ್ಟಬಹುದು, ಅದರ ಬಗ್ಗೆ ವಿಚಾರ ಮಾಡಿ.

ಶ್ರೀ ವೈ. ರಾಮಕೃಷ್ಣ.—ನಿಮಗೆ ಏನು ಹೊಳೆಯುತ್ತದೆ ಹೇಳಿ ನೋಡೋಣ.

ಶ್ರೀ ಜೆ ಎಚ್. ಪಟೇಲ್.—ಒಬ್ಬ ವಿದ್ಯಾವಂತ ಇರುತ್ತಾನೆ, ಅವನಿಗೆ ಎಲ್ಲಿಯೂ ಕೆಲಸ ಇರುವುದಿಲ್ಲ ಅಂತಹವನಿಗೆ ಅವನ ವಿದ್ಯೆಯನ್ನು ಸೆಕ್ಯೂರಿಟಿಯನ್ನಾಗಿ ಇಟ್ಟುಕೊಂಡು ಅವನಿಗೆ ಹಣ ಕೊಡಿ, ಅವನಿಗೆ ಬಹಳ ಕಡಿಮೆ ಬಡ್ಡಿಯಿಂದ ೫ ಸಾವಿರವೋ, ೧೦ ಸಾವಿರ ರೂಪಾಯಿಗಳೋ ನೀವು ಬಂಡವಾಳವನ್ನಾಗಿ ಹಣವನ್ನು ಕೊಟ್ಟರೆ ಆ ಬಂಡವಾಳದಿಂದ ಅವನ ಜೀವನ ನಡೆಯುವುದಕ್ಕೆ ಅನುಕೂಲವಾಗಬಹುದು. ಮತ್ತು ಅವನು ಹಳ್ಳಿಗಾಡಿನಲ್ಲಿರುವ ಸಾಮಾನ್ಯ ಜನರಿಗೆ ಸಮಯ ಬಂದಾಗ ೧೦-೨೦ ಅಥವಾ ೫೦ ರೂಪಾಯಿಗಳವರೆಗೆ ಸಹಾಯ ಮಾಡುತ್ತಾನೆ ಆದರೆ ಇದರಲ್ಲಿ ನಂಬಿಕೆ ಬೇಕು. ವಿಚಾರ ಮಾಡಿ. ೫ ರೂಪಾಯಿಗಳೂ ಕೂಡ ಹಳ್ಳಿಗಾಡಿನ ಮಟ್ಟದಲ್ಲಿ ಬಡವರಿಗೆ ಹುಟ್ಟುವುದಿಲ್ಲ. ಹಣವಿದ್ದವರು ಕೊಡುವು ದಿಲ್ಲ, ಸರ್ಕಾರದ ಹತ್ತಿರ ತೆಗೆದುಕೊ ಎಂಬುದಾಗಿ ಹೇಳುತ್ತಾರೆ. ಇದಕ್ಕೆ ಸರ್ಕಾರ ಉತ್ತರವನ್ನು ಕಂಡು ಹಿಡಿಯಬೇಕು. ಮತ್ತೆ ವಾಲ್ಯುವೇಷನ್ ಮಾಡುವುದು, ಯಾವ ಉದ್ದೇಶಕ್ಕೋಸ್ಕರ ಈ ಒಂದು ಕಾನೂನನ್ನು ತಂದಿದ್ದೀರೋ ಆ ಉದ್ದೇಶ ಇದರಿಂದ ಸಫಲವಾಗುವುದಿಲ್ಲ, ಈ ಒಂದು ಕಲಮನ್ನು ಸಾಧ್ಯ ವಿದ್ದರೆ ತೆಗೆದು ಹಾಕಿಬಿಡಿ. ಎರಡು ಯೂನಿಟ್‌ಗಳಲ್ಲಿದ್ದರೂ ಅವನು ಸಾಲವನ್ನು ತೀರಿಸುವಂತಹ ಸ್ಥಿತಿ ಯಲ್ಲಿರುವುದಿಲ್ಲ. ೨೪೦೦ ರೂಪಾಯಿಗಳೆಂದು ಇದ್ದುದನ್ನು ೪೮೦೦ ರೂಪಾಯಿಗಳೆಂದು ಮಾಡಿದ್ದೀರಿ, ಇದು ಸ್ವಾಗತಾರ್ಹವಾದುದು. ಏಕೆಂದರೆ ಜಮೀನನ್ನು ಲೆಕ್ಕ ಹಾಕಿದರೆ ಎರಡು ಯೂನಿಟ್‌ನಲ್ಲಿ ಇದೆ. ಆದರೆ ಅವನು ಸಾಲವನ್ನು ತೀರಿಸುವಂತಹ ಸ್ಥಿತಿಯಲ್ಲಿರುತ್ತಾನೆಂದು ನೀವು ಭಾವಿಸಿದ್ದರೆ ಅದು ತಪ್ಪು. ಹಳ್ಳಿಗಾಡಿನಲ್ಲಿ ಜಮೀನಿನಲ್ಲಿ ಕೆಲಸ ಮಾಡತಕ್ಕಂತಹವರು ಅದರಿಂದ ಬರತಕ್ಕಂತಹ ಉತ್ಪನ್ನದಿಂದ ಏನನ್ನೂ ಕಟ್ಟುತ್ತಿರುವಂತಹ ಸ್ಥಿತಿಯಲ್ಲಿರುವುದಿಲ್ಲ. ಹಳ್ಳಿಗಾಡಿನ ದೃಷ್ಟಿಯಿಂದ ಎರಡು ಯೂನಿಟ್ ಎಂಬುದಾಗಿ ಮಾಡಿದರೂ ಏನೂ ತಪ್ಪು ಇಲ್ಲ. ಕಡೆಯದಾಗಿ ಸರ್ಕಾರದ ಗಮನಕ್ಕೆ ತರಬೇಕಾದ ವಿಚಾರವೇನೆಂದರೆ, ಹಳ್ಳಿಗಾಡಿನ ಸಮಸ್ಯೆ ಬಹಳ ಗಂಭೀರವಾಗಿದೆ. ಕೊಟ್ಟಿರುವ ಸಾಲವನ್ನು ವಾಪಸ್ಸು ಕೊಡಬೇಡಿ

ಎಂಬುದಾಗಿ ಹೇಳಿದ್ದೀರಿ, ಇದರಿಂದಾಗಿ ಅವನಿಗೆ ಸಾಲ ಎಲ್ಲಿಯೂ ಹುಟ್ಟದೇ ಇರುವುದರಿಂದ ಸಣ್ಣ ಪುಟ್ಟ ಕೃಷಿ ಕಾರ್ಮಿಕರಿಗೆ, ಸಣ್ಣ ಪುಟ್ಟ ರೈತರಿಗೆ ಹಳ್ಳಿಗಾಡಿನಲ್ಲಿ ಜೀವನ ಮಾಡುವುದು ಬಹಳ ಕಷ್ಟವಾಗಿದೆ. ಇದಕ್ಕೇನಾದರೂ ಬದಲೀ ವ್ಯವಸ್ಥೆ ?ಮಾಡಬೇಕು, ಸಧ್ಯಕ್ಕೆ ಇಷ್ಟನ್ನಾದರೂ ಮಾಡಿ. ಇದನ್ನು ನಮ್ಮ ಮಾನ್ಯ ಬಸವಲಿಂಗಪ್ಪನವರ ಕಾಲದಲ್ಲಿ ಮಾಡಿದ್ದನ್ನು ನೀವು ಮುಂದುವರಿಸಿಕೊಂಡು ಹೋಗುತ್ತಿದ್ದೀರಿ, ಒಳ್ಳೆಯದು.

ಶ್ರೀ ಕೆ. ಬಿ. ಶಿವಯ್ಯ (ನಂಜನಗೂಡು).—ಮಾನ್ಯ ಅಧ್ಯಕ್ಷರೆ, ನಾನು ಶ್ರೀ ಷಾನ್ ಡಿ. ಜಯದೇವರಾಜ ಅರಸುರವರು ಏನು ಹೇಳಿದ್ದಾರೆ ಅದನ್ನೇ ಸ್ವಲ್ಪ ವಿಷದವಾಗಿ ಹೇಳುತ್ತೇನೆ. ಹೆಚ್ಚಿಗೆ ಇನ್ನೇನನ್ನೂ ಹೇಳುವುದಿಲ್ಲ. ರಿಲೀಫ್ ಯಾರಿಗೆ ಕೊಡಬೇಕೆಂಬುದರ ಬಗ್ಗೆ ಡೆಫಿನಿಷನ್ ಕ್ಲಾಸ್‌ನಲ್ಲಿ ಏನು ಹೇಳಿದ್ದಾರೆಂದರೆ,

> "he and members of his family own immovable property anywhere in India the market value of which is not less than ten thousand rupees"

ಇದು ಅವನ ವರಮಾನವನ್ನು ತೆಗೆದುಕೊಳ್ಳುವಾಗ ಬಹುಶ: ಹೆಚ್ಚಿಗೆ ತೊಂದರೆಯಾಗುತ್ತದೆ; ಯಾರಿಗೆ ರಿಲೀಫ್ ಕೊಡಬೇಕೆಂದಿದ್ದಿರೋ ಅಂತಹವರನ್ನು ಹೆಚ್ಚಿನ ತೊಂದರೆಗೆ ಈಡು ಮಾಡುತ್ತಿದ್ದೀರಿ. ಇದರಲ್ಲಿ ಲ್ಯಾಂಡ್‌ಲೆಸ್ ಅಗ್ರಿಕಲ್ಚರಿಸ್ಟ್ ಸ್ಮಾಲ್ ಫ್ಯಾಮಿಲಿ ಮತ್ತು ಇನ್ನು ಯಾರ್‍ಯಾರಿಗೆ ಕೊಡಬೇಕೆಂಬುದನ್ನು ಹೇಳಿದ್ದೀರಿ. ಆದರಲ್ಲಿ ಇಮ್ಮೂವಬಲ್ ಪ್ರಾಪರ್ಟಿ ಅಂದರೆ ಜಮೀನು ಆಗಿರಬಹುದು, ಅಥವಾ ಮನೆಯಾಗಿರಬಹುದು, ಆದ್ದರಿಂದ ೧೦ ಸಾವಿರ ರೂಪಾಯಿಗಳ ವರೆಗೆ ಎಂಬುದಾಗಿ ಇರುವುದರಿಂದ ಯಾರ್‍ಯಾರಿಗೆ ರಿಲೀಫ್ ಕೊಡಬೇಕೆದಿಂದ್ದಿರೋ ಅದು ಸಾಧ್ಯವಾಗುವುದಿಲ್ಲ. ಎರಡನೆಯದಾಗಿ, ಈಗಾಗಲೇ ಈ ಕಾನೂನು ಜಾರಿಯಲ್ಲಿದ್ದರೂ, ಅನೇಕ ಅಸಿಸ್ಟೆಂಟ್ ಕಮೀಷನರ್‌ಗಳು ಇವತ್ತಿನವರೆಗೆ ಕೇಸಸ್‌ಗಳನ್ನು ತೆಗೆದುಕೊಂಡು ವಿಚಾರಣೆ ಮಾಡುತ್ತಾ ಇಲ್ಲ. ಆದ್ದರಿಂದ ಪಾರ್ಟಿಗಳಿಗೆ ರಿಲೀಫ್ ಸಿಕ್ಕುತ್ತಾ ಇಲ್ಲ, ಆದಷ್ಟು ತೀವ್ರಗತಿಯಲ್ಲಿ ಅವರಿಗೆ ಪರಿಹಾರ ದೊರಕಿಸಿಕೊಡಬೇಕು, ವಿಚಾರಣೆ ಶೀಘ್ರವಾಗಿ ನಡೆಯಬೇಕು, ಹೆಚ್ಚು ಜನ ಅಗ್ರೀವ್ಡ್ ಪಾರ್ಟಿಗಳು ಇದ್ದರೆ, ಅವರು ಡೆಪ್ಯುಟಿಕಮೀಷನರ್‌ಗೆ ಅಫೀಲ್ ಹೋಗುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ ಅದು ಒಳ್ಳೆಯ ಕೆಲಸ. ಆದರೆ ಶೀಘ್ರಗತಿಯಲ್ಲಿ ಅವರಿಗೆ ಪರಿಹಾರ ಸಿಕ್ಕಿದರೆ ಒಳ್ಳೆಯದು, ಇನ್ನು ೧೦–೨೦ ಸಾವಿರ ಅರ್ಜಿಗಳು ತೀರ್ಮಾನವಾಗದೆ ಇವೆ. ಇವನ್ನು ಯಾವರೀತಿಯಿಂದ ಅವರಿಗೆ ಪರಿಹಾರ ದೊರಕಿಸಿಕೊಡುತ್ತೀರಿ ಮತ್ತು ಎಷ್ಟು ಅವಧಿಯಲ್ಲಿ ಅವರಿಗೆ ಪರಿಹಾರವನ್ನು ಕೊಡಿಸುತ್ತೀರಿ ? ತೀವ್ರವಾಗಿ ಯಾವ ಕ್ರಮವನ್ನು ತೆಗೆದುಕೊಳ್ಳುತ್ತೀರಿ ನೋಡಬೇಕು. ೨೦೦೦–೪೦೦೦ ಗೂಪಾಯಿಗಳ ಆದಾಯ ಬರಬೇಕು ಎಂದು ನಾವು ಮಾಡಿದ್ದು ಅದು ಜನರನ್ನು ಆಕರ್ಷಣೆ ಮಾಡುತ್ತದೆಂದು ತಿಳಿದಿದ್ದೆವು. ಆದರೆ ಹಾಗೆ ಆಗಲಿಲ್ಲ, ಆದ್ದರಿಂದ ಅವರಿಗೆ ಎಷ್ಟರಮಟ್ಟಿಗೆ ಪರಿಹಾರ ಸಿಕ್ಕುತ್ತದೆ ನೋಡಬೇಕು.

ಶ್ರೀಮತಿ ಎಸ್. ಪ್ರಮೀಳಾ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೆ, ಇಲ್ಲಿ ಡೆಫಿನಿಷನ್ ಕ್ಲಾಸ್ ೭ರಲ್ಲಿ ಫ್ಯಾಮಿಲಿ ಎಂದು ಹೇಳಿದ್ದಾರೆ. ಇದರಲ್ಲಿ ಹೆಂಡತಿ, ಗಂಡ ಮತ್ತು ಮಕ್ಕಳು ಎಂದು ಇದೆ, ಅಂದರೆ ಕುಟುಂಬ ಎಂದರೆ ಗಂಡ ಹೆಂಡತಿ ಮತ್ತು ಮಕ್ಕಳು. ನಾವು ಪ್ರತಿದಿವಸ ನೋಡುತ್ತಿರುತ್ತೇವೆ ಕೋರ್ಟುಗಳಲ್ಲಿ, ಒಂದು ಕುಟುಂಬದಲ್ಲಿ ತಂದೆ ತಾಯಿಗಳ, ಮಕ್ಕಳು ಗೆಜೆಟೆಡ್ ಆಿಪೀಸರ್ಸ್‌ಗಳು ಆಗಿ ಒಟ್ಟು ಕುಟುಂಬದಲ್ಲಿ ಇರುತ್ತಾರೆ. ಅಂಥಹ ಕುಟುಂಬಗಳ ಒಟ್ಟು ಸಂಪಾದನೆಯನ್ನು ನೋಡಿದರೆ ಹತ್ತು ಸಾವಿರಕ್ಕೂ ಹೆಚ್ಚು ಇರುತ್ತದೆ. ಅಂತಹ ಒಂದು ಪರಿಸ್ಥಿತಿಯಲ್ಲಿ ದಯವಿಟ್ಟು ಒಟ್ಟು ಕುಟುಂಬದ ಆದಾಯವನ್ನು ತೆಗೆದುಕೊಳ್ಳಬೇಕು, ಇಲ್ಲದೆ ಹೋದರೆ ಇದರಿಂದ ಹಲವಾರು ಜನರು ಕಾನೂನಿನ ದುರುಪಯೋಗವನ್ನು ಪಡೆಯುತ್ತಾರೆಂದು ಹೇಳುತ್ತೇನೆ.

2. Definitions–In this Act, unless the context otherwise requires,–

(7) "family" in relation to a person means such person, the wife or husband, as the case may be, of such person, and their minor children;

ಇನ್ನು ಸೆಕ್ಷನ್ ೧೪ರಲ್ಲಿ ಜುಡಿಷಿಯರಿಯಲ್ಲಿ ಇದ್ದದ್ದನ್ನು ತೆಗೆದು ಹಾಕಿ ಯಾವ ಕ್ಲಾಸಿಗೆ ಅಪೀಲ್ ಮಾಡುವ ಅವಕಾಶವಿರಬೇಕೋ ಅದನ್ನೇ ತೆಗೆದು ಹಾಕಿ ರಿವಿಷನ್ ಬೈ ಡೆಪ್ಯುಟಿ ಕಮಿಷನರ್ ಇದ್ದದ್ದನ್ನು ತಹಸೀಲ್ದಾರ್‌ಗೆ ಹಾಕಿದ್ದೀರಿ. ಜುಡಿಷಿಯಲ್ ಅಥಾರಿಟಿಗೆ ಇದ್ದ ಪವರ್ಸನ್ನು ತೆಗೆದು ಎಗ್ಸಿಕ್ಯೂಟೀವ್ ಅಥಾರಿಟಿಗೆ ಕೊಡತಕ್ಕಂಥ ಉದ್ದೇಶವಾದರೂ ಏನು, ಏನೂ ಇಲ್ಲದೆ ರಿವಿಷನ್ ಬೈ ಡೆಪ್ಯುಟಿ ಕಮಿಷನರ್ ಎಂದು ಯಾವ ಕಾರಣಕ್ಕಾಗಿ ಇದನ್ನು ತಂದಿದ್ದೀರಿ ?

> " 14. Revision by the Deputy Commissioner.— The Deputy Commissioner may, on his own motion or on the application of any person aggrieved by on order passed under Section 13 at any time, call for and examine the records of the proceedings leading to such order, for the purpose of satisfying himself as to the legality of such proceeding and may pass such orders with respect thereto as he thinks fit:
>
> Provided that no such order shall be made except after giving the person affected a reasonable opportunity of being heard. "

ಸ್ಟೇ ತೆಗೆದುಕೊಳ್ಳಬೇಕಾದರೆ ಅಗ್ರೀವ್ಡ್ ಪಾರ್ಟಿಗೆ ಅವಕಾಶ ಕೊಟ್ಟಿಲ್ಲ. ಇಲ್ಲಿಯುವರೆಗೂ ಹೈಕೋರ್ಟಿಗೆ ಹೋಗಿ ಸ್ಟೇ ಆರ್ಡರ್ ತೆಗೆದುಕೊಳ್ಳುತ್ತಾ ಇದ್ದರು. ಇನ್ನು ಸೆಕ್ಷನ್ ೧೪ರಲ್ಲಿ ಜುಡಿಷಿಯರಿಯಲ್ಲಿದ್ದದ್ದನ್ನು ಡೆಪ್ಯೂಟಿ ಕಮಿಷನರ್‌ಗೆ ಅಪ್ಲಿಕೇಷನ್ ಹಾಕಿದರೆ ಸ್ಟೇ ಕೊಡುವುದಕ್ಕೆ ಅವಕಾಶ ಕೊಡದೆ ಇರುವುದರಿಂದ ಅಭ್ಯರ್ಥಿಗಳಿಗೆ ತೊಂದರೆಯಾಗುತ್ತದೆ. ಆದುದರಿಂದ ನಾನು ಕೇಳುವುದು ಹಿಂದೆ ಇದ್ದ ಪ್ರಕಾರ ಸಬ್‌ಡಿವಿಷನಲ್ ಮಾಜಿಸ್ಟ್ರೇಟ್ ಅವರಿಗೆ ಸ್ಟೇ ಕೊಡುವುದಕ್ಕೆ ಅವಕಾಶ ಮಾಡಿಕೊಡುವುದು ಸೂಕ್ತ, ಇದನ್ನು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಒಂದು ಉದ್ದೇಶ ಇದೆ. ಅದು ಸಾಧನೆಯಾಗುವುದಿಲ್ಲ. ಕಾರಣವಾದರೂ ಇಷ್ಟೆ ಡೆಪ್ಯುಟಿ ಕಮಿಷನರ್ ಬೆಳಿಗ್ಗೆ ಹೋದರೆ ಅವರು ಯಾವಾಗ ಮತ್ತೆ ಕಛೇರಿಗೆ ಬರುತ್ತಾರೋ ಹೇಳುವುದಕ್ಕೆ ಬರುವುದಿಲ್ಲ. ಅವರನ್ನು ನೋಡಲಿಕ್ಕೆ ಹೋದವರು ರೂಮಿನ ಮುಂದೆ ದಿನಗಟ್ಟಲೇ ಕಾಯಬೇಕಾಗುತ್ತದೆ. ಆದ್ದರಿಂದ ಆ ಅಧಿಕಾರವನ್ನು ಜುಡಿಷಿಯರಿಗೆ ಕೊಡಬೇಕೆಂದು ಹೇಳುತ್ತೇನೆ. ಇನ್ನು ಪೆಂಡಿನ್ನಿ ಆರ್ಡರ್‌ಗಳು ಬಹಳಷ್ಟು ಇರುವುದರಿಂದ ಅದಕ್ಕೆ ಸರಿಯಾದ ವ್ಯವಸ್ಥೆ ಮಾಡಿಲ್ಲ. ಎಷ್ಟೋ ಕೇಸುಗಳು ಇನ್ನು ಹೈಕೋರ್ಟಿನಲ್ಲಿ ತೀರ್ಮಾನವಾಗ ಬೇಕಾದ್ದು ಇವೆ. ಅವುಗಳನ್ನೆಲ್ಲಾ ಮತ್ತೆ ರಿವಿಷನ್ ಬೈ ಡೆಪ್ಯುಟಿ ಕಮಿಷನರ್ ಎಂದು ಹೇಳಿದ್ದಾರೆ ಇದನ್ನು ಯಾವರೀತಿ ತೀರ್ಮಾನ ತೆಗೆದುಕೊಳ್ಳುತ್ತೀರಿ ಎಂದು ನನಗೆ ಸಮಂಜಸವಾದ ಉತ್ತರಕೊಡ ಬೇಕು, ತಾವು ತಂದಿರುವ ಉದ್ದಿಶ್ಯ ಏನು ಪ್ರಯೋಜನ ಆಗುವುದಿಲ್ಲ. Poor family and weaker sections of the people ಎಂದು ಹೇಳಿದ್ದೀರಿ ?

> " The definition of Weaker Section " should include the aggregate income of " Family " of the debtor as against the individual income at present.

ಎಂದು ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಆಂಡ್ ರೀಸನ್ಸ್‌ನಲ್ಲಿ ಹೇಳಿದ್ದೀರಿ. ಇದರಲ್ಲಿ ನಿಮ್ಮ ಉದ್ದೇಶ ನನಗೆ ಅರ್ಥವಾಗುವುದಿಲ್ಲ. ಸಾರ್ವಜನಿಕರಿಂದ ಪಡೆದ ಹಣವನ್ನು ವಾಪಸ್ ಕೊಡಬೇಡಿ ಎನ್ನುವವರು ಸರ್ಕಾರದಿಂದ ಕೊಟ್ಟಿರತಕ್ಕಂಥ ತಕಾವಿ ಸಾಲಗಳನ್ನು ಮತ್ತು ಸೊಸೈಟಿಗಳಿಂದ ಕೊಟ್ಟಿರತಕ್ಕಂಥ ಸಾಲ ಗಳನ್ನು ಕೊಡಬೇಕು ಇಲ್ಲದಿದ್ದರೆ ಜಪ್ತಿಮಾಡಿ ವಸೂಲುಮಾಡುತ್ತಿದ್ದೀರಿ ಕೊಟ್ಟವರ ಒಡವೆ ಕೊಡ ಬೇಡಿ ಎಂದು ಸರ್ಕಾರದವರು ಹೇಳುತ್ತಾ ಸರ್ಕಾರ ಕೊಟ್ಟಿದ್ದನ್ನು ಮಾತ್ರ ಜಪ್ತಿ ಮುಖಾಂತರ ವಸೂಲು ಮಾಡುವುದು ಇದು ಯಾವ ಧ್ಯೇಯ. ಕ್ಲಾಸ್ ೧೦ರಲ್ಲಿ ಇರುವುದನ್ನು ಎಲ್ಲಾ ತೆಗೆದುಹಾಕಿ ಸರ್ಕಾರ ಕೊಟ್ಟಿರುವುದು, ಎಲ್‌ಐಸಿ, ಕೋ ಆಪರೇಟಿವ್ ಬ್ಯಾಂಕ್ ಇನ್ನು ಅನೇಕ ಏಜೆನ್ಸಿಗಳಿಂದ ಕೊಟ್ಟಿರು ವುದನ್ನು ಮನ್ನಾ ಮಾಡಿ ಎಂದು ಹೇಳುತ್ತೇನೆ. ಇನ್ನು ಕೆಲವು ಚಿಟ್ ಫಂಡ್‌ಗಳು ಟ್ರಾನ್ಸಾಕ್ಷನ್

ಮಾಡುತ್ತಿವೆ ಅವುಗಳಿಂದ ಜನರಿಗೆ ಮೋಸ ಆಗತಕ್ಕಂಥ ರೀತಿ ಹೇಳುತ್ತೇನೆ, ಜನರಿಗೆ ಸಾಲ ಕೊಟ್ಟು ವಸೂಲಿ ಮಾಡುವುದನ್ನು ನೋಡಿದರೆ ಈ ಕಾನೂನು ಅವರಿಗೂ ಅಪ್ಲೈ ಆಗಬೇಕು ಎಂದು ಏನು ಕಾನೂನುತಂದಿದ್ದೀರಿ ಅದು ಸಮಗ್ರವಾಗಿ ಎಲ್ಲರಿಗೂ ಅನ್ವಯಿಸುವಂತೆ ಇರಬೇಕು ಎಂದು ಕಳಕಳಿಯಿಂದ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† SRI V. M. KUSHNOOR.— Speaker Sir, I welcome this measure, and I whole heartedly support this Bill. Some of the earlier speakers have expressed their opinions about the definition of small farmers. The Minister himself has stated that he is going to amend Section 9 of the Act. The definition of small farmers, should be according to the definition prevailing in similar Acts, throughout India. The definition of small farmers should be like the definition of the term by the Reserve Bank of India or Agricultural Re-finance Corporation. The small farmers should having 5 to 10 acres of land. I bring to the notice of the Hon. Minister that we have earlier suggested that two units must be retained and that a farmer with two units of land without any other source of income should be called the small farmer. I humbly submit that these 2 units must stand unless we all agree for any reduction. If it is reduced it will be meaningless. Very few of them will get benefit from this Act. As per my suggestion two units must be maintained and this decision has been arrived at after having gone through so many definitions of small farmers in many Acts. We have also gone through the definition of the small farmers defined in the Agricultural Re-finance Corporation Act and also in the Reserve Bank Act. We have suggested some reliefs under clauses 2 to 11, depending upon the income of the family as a whole. Two units is worth about Rs. 10,000/-. If you allow them 15 acres it would be more. I would like to appreciate the Hon. Minister for the consent he has given to increase the income limit from Rs. 2,400/- to Rs. 4,800/-. It would be more helpful if the debtors who have taken loan 5 to 10 years before the commencement of this Act are let off If the debtor puts up an application saying that he was having only Rs. 4,800/- income, it should be taken into consideration. I am very happy the poor ryots will get good benefits from this concession. If you want to help the poor ryots, you must have liberal concessions shown to them otherwise there will not be much benefits accrued to them, As you all know, if the poor ryots are encouraged, they will have more interest in agriculture. If a ryots has got a big landed property and if he gets only the income within Rs 4,800/- this man also should be given this concession, You cannot restrict them to get this concession while assessing his income. He may be getting every year more income. If puts up an application that he is getting only Rs. 4,800/- this application should be taken into consideration for giving concession. There is a special clause 2, Sub clause (11)

which applies to urban area. There should not be any objection to this special clause, The people will get justice. The cases should be disposed off by the concerned Officers as early as possible. Through there are a lot of restrictions. Such restrictions should not come in the way. These weaker sections getting the benefits. The Minister can look into these matters and see that the weaker section of the people get benefits from this amending Bill. I therefore, request the House to pass this Bill unanimously,

† SRI M. C. NANAIAH.— Mr. Speaker Sir, the Karnataka Debt Relief Bill has been introduced, I think if I can draw the attention of the Hon, Speaker to the Bill along with the statement of objections and reasons, he will understand that this Bill suffers from legal inabilities and as such it cannot be taken up for discussion. as it is, for the simple reason that the definition of Asst. Commissioner who is excercising his authority under the Land Reforms Act, is a person to whom the application will have to be the filed. Now the definition in clause 3, says that the Asst. Commissioner includes any officer of the Revenue Department not below the rank of a Tahasildhar authorised by the State Government to exercise the powers enumerated in the Act.

5-00 p. m.

The Assistant Commissioner is a person as defined under the Land Revenue Act, to whom, according to this Bill. applications will have to be presented. If I am correct, any Bill has to be supported by the statement of objects and reasons. Any Bill without the statement of objects and reasons is not a Bill and it cannot be taken up for discussion. In Bill as presented with the statement of objects we find conflecting views. As far as the objects and reasons are concerned, it is stated that "orders issued by Sub-Divisional Magistrates should be made applicable to the judiciary." who is this Sub-Divisional Magistrate ? As for as the Assistant Commissioner is concerned he is a person exercising authority under the Land Revenue Act ; Sub-Divisional Magistrate is a persen who excercise his authority under the Criminal Procedure Code.

SRI. A. B. JAKANUR.— This is a suggestion of the people.

SRI M. C. NANAIAH.— The Hon. Minister has introduced this Bill, the statement of objects has been appended to the Bill. I want to know whether the statement of objects and reasons are different from the Bill or do they form part and parcel of the Bill. If they do not form part and parcel of this Bill, then this Bill cannot be taken up for discussion.

Mr. Speaker.— The statement of objects and reasons are not part and parcel of the Bill ; they are only an explanation.

Sri M. C. Nanaiah.— As far as the statement of objects and reasons are concerned. the Sub-Divisional Magistrate is a non-entity because his name does not find a place in the 'definition'. The second thing is, the orders of the Sub-Divisional Magistrate should be made appealable to the judiciary. Now the Deputy Commissioner is the revisional authority under the Act. Who is the deputy Commissiener? The Deputy commissioner is also a person who is coming under the Land Revenue Act. The District Magistrate is a person who exercises his authority under the Criminal Procedure Code. We are in such a state of confusion, we do not know who is the authority, whether we should go by the statement of objects and reasons given by the Government or whether we should go by the definition as contained in the Bill. There are conflicting views about the official status of the officers concerned as defined in the Bill and as stated in the statement of objects and reasons. As such the Bill cannot be taken up for discussion. I would request the Hon Speaker to tell the Government to withdraw the Bill as such and come forward with a new statement of objects and reasons, It is not known whether the application has to be presented to the Assistant Commissioner as stated in the definition of the Bill, or to the Sub-Divisional Magistrate as stated in the statement of objects and reasons, These are legal informities from which this Bill suffers. After hearing from the Minister, I shall advance my further arguments on the Bill. I would appeal to the Minister to withdraw the Bill and come forward with a fresh Bill, with a fresh statement of objects and reasons to clarify the position. These irregularities cannot be cured at all. These are part and parcel of the entire proceedings, As such I very much request the Hon. Speaker to advise the Government to withdraw the Bill and come forward with a definite statement of objects and reasons.

Mr. Speaker.—Let us hear the Hon. Minister.

Sri A. B. Jakanur.—I shall reply after a full discussion on the Bill.

Sri M. C. Nanaiah.—I am under the mercy of the Speaker. The Hon. Speaker should find out whether this Bill, where in we find some confusion in the statement of objects and reasons, can be taken up for discussion. If the government is not willing to withdraw the Bill, the Hon. Speaker can exercise his inherent authority and advise the government to withdrsw the Bill. I would request the Hon. Speakar to give his ruling so as to enable the government to withdraw the Bill. I have raised only the legal infirmities. I am insisting for a ruling by the Chair. There is no question of standing on prestige.

ಶ್ರೀ ಕೆ. ದಿವಾಕರ್—ಮಾನ್ಯ ಮಂತ್ರಿಗಳು ಹೇಳಿದ ಹಾಗೆ, ಮಾನ್ಯ ಸದಸ್ಯರು ಹೇಳಬೇಕಾದ ವಿಷಯಗಳನ್ನು ಹೇಳಲಿ, ಕೊನೆಯಲ್ಲಿ ಅವರು ಉತ್ತರ ಕೊಡುತ್ತಾರೆ.

ಶ್ರೀ ಎಂ. ಸಿ.ನಾಣಯ್ಯ—ನಾನು ಕೆಲವು ಕಾನೂನಿನ ತೊಡಕುಗಳನ್ನು ಈ ವಿಷಯದ ಬಗ್ಗೆ ಎತ್ತಿದ್ದೇನೆ. ಮಾನ್ಯ ದಿವಾಕರ್ ಅವರು ಇದರ ಬಗ್ಗೆ ಬೆಳಕನ್ನು ಚೆಲ್ಲುವುದಿದ್ದರೆ ಒಳ್ಳೆಯದು.

SRI Y. RAMAKRISHNA.—The statement of objects and reasons does not form part and parcel of the Bill. Hon Minister will reply after the discussion. Why should we withdraw the Bill?

MR. SPEAKER.—I have clearly stated that it is not part of the Bill. The statement of objects and reasons has to be framed in non-technical language; it should not be unduly long, nor should it contain anything of an argumentative character. It can be revised if the Speaker so desires. Moreover, it has to be signed by the member in-charge of the Bill. If the government feels that they want to amend, they can amend it, I have no objection but it is for the government to say so,

SRI A. B. JAKANUR.—No amendment is necessary to this Bill. I shall reply during the course of my reply to the debate.

ಶ್ರೀ ಜೆ. ಹೆಚ್. ಪಟೇಲ್—ಸರ್ಕಾರಕ್ಕೆ ಏನಾದರೂ ಆಬ್ಜೆಕ್ಟ್ಸ್ ಇವೆಯೋ ? ಆಬ್ಜೆಕ್ಟ್ಸ್ ಇಲ್ಲ, ರೀಸನ್ಸ್ ಇಲ್ಲ. ಅಧಿಕಾರಿಗಳು ಏನು ಬರೆಯುತ್ತಾರೆಯೋ ಅದೇ ಆಬ್ಜೆಕ್ಟ್ಸ್ ಅವರು ಏನು ಹೇಳುತ್ತಾರೆಯೊ ಅದೇ ರೀಸನ್ಸ್. ಅದು ಇವರ ತಪ್ಪಲ್ಲ, ಬರೆದು ಕೊಡುವವರ ತಪ್ಪು. ಇವರ ಆಬ್ಜೆಕ್ಟ್ಸ್ ಬೇರೆ, ರೀಸನ್ಸ ಬೇರೆ. ಅಧಿಕಾರಿಗಳು ಇಂಗ್ಲೀಷಿನಲ್ಲಿ ಬರೆದುಕೊಡುತ್ತಾರೆ, ಇವರಿಗೆ ಇಂಗ್ಲೀಷ ಬರುವುದಿಲ್ಲ. ಸಬ್ ಡಿವಿಷನಲ್ ಮ್ಯಾಜಿಸ್ಟ್ರೇಟ್ ಎಂದರೆ ಅಸಿಸ್ಟೆಂಟ್ ಕಮಿಷನರ್ ಎಂದು ಮನಸ್ಸಿನಲ್ಲಿಟ್ಟುಕೊಂಡು ಇವರು ಆಬ್ಜೆಕ್ಟ್ಸ ಬರೆಯುತ್ತಾರೆ. ನಿಮಗೆ ಬರೆದುಕೊಡುವವರಿಗೆ ಇನ್ನಷ್ಟು ಸಂಬಳ ಜಾಸ್ತಿ ಕೊಟ್ಟು ಸರಿಯಾಗಿ ಬರೆಯಲು ತಿಳಿಸಿಬೇಕೆಂದು ನಾನು ಹೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಬಿಲ್ ಮಾಡಿದವರು ನಿಮ್ಮವರೇ ?

ಶ್ರೀ ಎಂ. ಸಿ. ನಾಣಯ್ಯ.—ತಪ್ಪಾಗಿದೆಯೆಂದು ಸರ್ಕಾರಕ್ಕೆ ಗೊತ್ತಾದ ಮೇಲೆ ಅದನ್ನು ಒಪ್ಪಿಕೊಂಡು ತಿದ್ದುಪಡಿ ಮಾಡಲಿಕ್ಕೆ ಏನುಕಷ್ಟ ?

MR SPEAKER.—I would like to draw the attention of the hon. members to page 460 of Practice and Procedure of Parliament by M.N. Kaul and S. L. Shakdher, wherein it is stated as follows:—

"It has been the uniform practice since 1862 to append to every Bill a Statement of Objects and Reasons, briefly explaining the propose of the proposed legislation. The Statement is explanatory of the contents and objects of a Bill and helps in understanding the necessity and scope of the Bill but Courts cannot rely on it in construing an Act for the reason that it refers to the Bill as introduced and the Bill may undergo considerable altertion before it is passed. The meaning of the legislature must be deduced from the language it has actually used and not from its presumed intentions. It has, therefore, to be excluded from consideration when construing an Act.

The Statement of Objects and Reasons has to be framed in non-technical language. It should not be unduly long nor should it contain anything of an argumentative character, and it can be revised if the Speaker so desires. Moreover, it is to be signed by the member in charge of the Bill.

The Statement can be amended by the member in charge of the Bill with the permission of the Speaker, at the time of introducing the Bill. Any l acuna in the Statement of Objects Reasons must be pointed out at the time of introduction of the Bill; a point raised in that regard at the consideration stage of the Bill is not valid."

SRI M. C. NANAIAH.—Sir, the Bill has already been introduced. Even if the Government wants to bring in an amendment, it is not valid. So, the only alternative left for the Government is to bring a fresh Bill.

MR. SPEAKER.—It has been stated that the point raised in that regard at the consideration stage of the Bill is not valid;

SRI M. C. NANAIAH.—Sri, the Bill has already has been introduced, and if the Government decides to bring in an amendment it is not valid. So, the Government is in such a fix wherein there is no alternative but to withdraw the Bill. Let the Government gracefully withdraw t. I do admit that the Statsment of Objects and Reasons has to be framed in a non-technical language.

SRI V. M. KUSHNOOR.—Sir, at this stage any objection to the Statement of Objects and Reasons is not valid. Therefore the point raised by my hon. friend Sri M. C. Nanaiah should be over-ruled.

SRI K. H. SRINIVASA.—Sir, the point I would like the Hon'ble Minister to examine is, whether the Statement of Objects and Reasons reflect the contents of the Bill. If there is any dichotomy between what is obtained between the Statement of Objects and Reasony and what is obtained under the clauses in the Bill, then a point arises for consideration. It may not be correct to say that this dichotoms is very fatal to the Bill, because after all an established rule that the Statement of Objects and Reasons do not form part of the Bill, but it is only appended to it, But, the Statement of Objects and Reasons had got its own place; it is not as if it is totally irrelevant. After all, tomorrow somebody else will have to interpret the various clauses when they want to implement the provisions of the Bill, and this will be the hands of officers, who may or may not be well versed with legal procedure and construction of legal provisions as such. When we want to understand a Bill, the first thing is to read the Statement of Objects and Reasons. Even suppose if the Hon'ble Minister were to enter the House in haste and wants to pilot the Bill,

